ನಾನೇ ಅವಳಿಗೆ ವಿವರಿಸಿದೆ: 'ಸಿಸಿ ಕ್ಯಾಮರಾ ಫೂಟೇಜ್ ಅಥವಾ ಫೋನಿನಲ್ಲಿ ಮಾತಾಡಿದ ಧ್ವನಿ ಏನಾದ್ರೂ ಇದೆಯಾ?' ತಕ್ಷಣ ಸಬೀನಾ ತನ್ನ ಸಣ್ಣ ಫೋನ್ ತೆಗೆದು ತೋರುತ್ತ, 'ಇದರಲ್ಲಿ ಹಮೀದ್ ಕೊಟ್ಟ ಎಲ್ಲ ಮೆಸೇಜ್ ಇತ್ತು ಮೇಡಂ. ಆ ದಿನ ಫ್ಯಾಕ್ಟರಿ ಗೇಟಿನಲ್ಲಿ ಗಲಾಟೆ ಮಾಡಿ ಸ್ಟೇಷನ್ನಿಗೆ ಕರೆದು ಬೆದರಿಕೆ ಹಾಕಿ ಸಹಿ ತೊಗೊಂಡರು ಅಂದ್ನಲ್ಲ, ಆ ದಿನಾನೇ ಈ ಮೊಬೈಲ್ ಕಸಿದು ಎಲ್ಲ ಡಿಲೀಟ್ ಮಾಡಿಬಿಟ್ರು' ಅಂದಳು, 'ಯಾರು ಟಿಲೀಟ್ ಮಾಡಿದ್ದು, ಪೊಲೀಸರೇ?' ಕೇಳಿದರು ಮೇಡಂ. 'ಹಮೀದ್ ಅವರ ತಮ್ಮ ಸಲೀಮ್ ಬಾಯಿಯೇ ಡಿಲೀಟ್ ಮಾಡಿದ್ದು ಮೇಡಂ. ಹಮೀದ್‌ಗೆ ಅಷ್ಟು ಮೊಬೈಲ್ ಬಳ್ಸೂದು ಗೊತ್ತಿಲ್ಲ, ಆದ್ರೂ ಇಂಗ್ಲಿಷ್‌ನಾಗೆಲ್ಲ ಮೆಸೆಜ್ ಮಾಡಿದ್ದರೀ. ಓದಾಕ ಬರಿಯಾಕೂ ಅಷ್ಟ ಬರಂಗಿಲ್ರಿ ಅವ್ರಿಗೆ. ನಾಕ್ನೆಯತ್ತ ಅಷ್ಟ ಕಲ್ತಾರ್ರೀ ಅವ್ರು' ಅಂದಳು ಸಬೀನಾ. 'ಎಲ್ಲ ಬರ್ತಿರ್ತದೆ, ನೀನು ಫೂಲ್ ಆಗಿ ಅಷ್ಟ' ಅಂದೆ ನಾನು. ರಜಿಯಾ ಅದಕ್ಕೆ, 'ನಮಗೆ ಅಗತ್ಯವಿದ್ದರೆ ಅದನ್ನು ಮತ್ತೆ ಪಡೀಬಹುದು ಬಿಡ್ರೀ' ಅಂತ ನೆನಪಿಸಿದರು.



'ನೀನು ಪುನಃ ಅವರ ಫ್ಯಾಕ್ಟರಿ ಮುಂದೆ ಯಾಕೆ ಹೋದಿ? ಬೇರೆ ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಟ್ರೈ ಮಾಡ್ಬೇಕಿತ್ತು' ಅನ್ನಲು ಹೋದೆ ನಾನು. 'ಸುಮಾರು ಐದಾರು ಫ್ಯಾಕ್ಟರಿಲಿ ಕೆಲಸ ಕೇಳಿ ಹೋದೆ ಮೇಡಂ, ಎಲ್ಲ ಒಂದೇ ಯೂನಿಯನ್ ಅವರ್ದು, ಕಾಲ್ ಗರ್ಲ್ ಅವ್ಳು ಕೆಲ್ಸ ಕೊಡ್ಬೇಡಿ ಅಂತ ಆ ಸಲೀಮ್ ಬಾಯಿ ಎಲ್ಲರಿಗೆ ಫೋನ್ ಮಾಡಿ ಹೇಳ್ಯಾನಂತೆ. ಅವಳನ್ನು ಭಿಕ್ಷೆ ಬೇಡಲು ಹಚ್ದೇ ಬಿಡುದಿಲ್ಲ ಅಂತ ಫ್ಯಾಕ್ಟರಿಯಾಗೆಲ್ಲ ಕೂಗಾಡ್ಯಾನಂತೆ ಮೇಡಂ, ನನ್ನ ಗೆಳತಿ ಹೇಳಿದ್ಲು' ಅಂದಳು ಸಬೀನಾ. 'ಅಯ್ಯೋ ನೀನು ಸುಮ್ಮನೇ ಬಂದ್ಯಾ? ಕಂಪ್ಲೆಂಟ್ ಕೊಡಬೇಕಿತ್ತು ಅವ್ನ ಮೇಲೆ, ಕಾಲ್ ಗರ್ಲ್ ಅನ್ನೋತನ ಸುಮ್ನೇ ಇರ್ತಾರಾ?' ಅಂತ ಈಗ ರಜಿಯಾನೂ ಬೇಸರ ಮಾಡಿಕೊಂಡರು. 'ಎಲ್ಲೂ ಕೆಲಸ ಸಿಗದೇ ನಾನೂ ನನ್ನ ಮಗನೂ ಉಪಾಸ ಇರೂ ಟೈಮಿಗೆ ಉಪಾಯವಿಲ್ಲದೇ ಮತ್ತೆ ಹೋಗಿ ಕಾಲು ಹಿಡಿದೆ ಮೇಡಂ' ಸಬೀನಾ ಅಳುವ ಸ್ವರದಲ್ಲಿ ಹೇಳಿದಳು. 'ಹೌದು, ಈಗ ನಿನ್ನ ಕೊನೇ ಬೇಡಿಕೆ ಏನು?' 'ಅವರ ಫ್ಯಾಕ್ಟರಿಯಲ್ಲೇ ಕೆಲಸ ಕೊಡ್ಲಿ ಮೇಡಂ, ಇಲ್ಲದಿದ್ರೆ ಹಮೀದ್ ಮೊದಲು ಭರವಸೆ ಕೊಟ್ಟಂತೆ ನನ್ನ ಮದುವೆ ಆಗ್ಲಿ' ಅಂದದ್ದು ನಮ್ಮ ಮೂವರಿಗೂ ಸರಿಯೆನಿಸಿ, 'ಹಮೀದ್ ಅವಿವಾಹಿತ ಅಂತಾಳೆ, ಮದ್ವೆ ಮಾಡ್ಕೊಳ್ಳಿಕ್ಕೇನು ಧಾಡಿ? ಆ ಬಗ್ಗೆ ಹಮೀದನ ಬಳಿಯೂ ಮಾತಾಡಿದ ನಂತರವೇ ನಿರ್ಧರಿಸುವ' ಅಂತ ಮೇಡಂ ಜೊತೆಗೂಡಿ ಮಾತಾಡಿಕೊಂಡೆವು.